**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:11**

**ಎಸ್.ಸಿ. ಸಂಖ್ಯೆ: 530/2022** ಹೆಚ್ಚುವರಿ ಸಾಕ್ಷಿ:**11**

**ಸಾಕ್ಷಿದಾರರ ಹೆಸರು** : ಶ್ರೀಕಾಂತ್ ಕೆ

ತಂದೆ **ಹೆಸರು** : ನರಸಿಂಹ

**ವಯಸ್ಸು** : **52**

**ವೃತ್ತಿ** : ಎಸಿಪಿ ಮಂಗಳೂರು ಉತ್ತರ ಉಪ ವಿಭಾಗ

**ವಾಸ** : ಪಣಂಬೂರು

**ದಿನಾಂಕ: 02-07-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನಾನು ದಿನಾಂಕ:**24-01-2021** ರಿಂದ ದಿನಾಂಕ:**02-01-2023**ರ ವರೆಗೆ ಕುಂದಾಪುರ ಉಪ ವಿಭಾಗದ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ:**13-05-2022**ರಂದು ಹಿಂದಿನ ತನಿಖಾಧಿಕಾರಿಯವರಾದ ವಿಶ್ವನಾಥ ಪಂಡಿತ್ ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ಪರಿಶೀಲಿಸಿದಾಗ ಹಿಂದಿನ ತನಿಖಾಧಿಕಾರಿಯವರು ಆರೋಪಿತ ಬಿಜಿ ಕೃಷ್ಣಮೂರ್ತಿ, ಇವನ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ತಲೆಮರೆಸಿಕೊಂಡಿದ್ದಾರೆ ಎಂದು ದೋಷಾರೋಪಣಾ ಪತ್ರವನ್ನು ಸಲ್ಲಿಸಿದ್ದರು.

ಈ ಪ್ರಕರಣದಲ್ಲಿ ಅದೇ ದಿನ ಆರೋಪಿ ಕೃಷ್ಣಮೂರ್ತಿ ಈತನ ಮೇಲೆ ಬಾಡೀ ವಾರೆಂಟ್ ಹೊರಡಿಸುವಂತೆ ಮಾನ್ಯ ಪಿ ಸಿ ಜೆ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಬೈಂದೂರು ರವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ.

ದಿನಾಂಕ:**16-05-2022**ರಂದು ಈ ಪ್ರಕರಣದಲ್ಲಿ ತನಿಖೆಯನ್ನು ಮುಂದುವರಿಸಲು ಅನುಮತಿ ನೀಡುವಂತೆ ಕಲಂ **173(8)** ಸಿ ಆರ್ ಪಿ ಸಿ ಯಂತೆ ಮಾನ್ಯ ಪಿ ಸಿ ಜೆ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕುಂದಾಪುರ ಇವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿ ಸದ್ರಿ ಕೋರಿಕೆ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-**24** ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-**24** ಎ ಎಂದು

ಗುರುತಿಸಲಾಯಿತು. ಶಂಕರನಾರಾಯಣ ಪೋಲೀಸು ಠಾಣಾ ಅಪರಾಧ ಕ್ರಮ ಸಂಖ್ಯೆ 110/2003ರ ತನಿಖೆಯಲ್ಲಿ ದಿನಾಂಕ:12-05-2022ರಂದು ಆರೋಪಿಯು ಸ್ವ ಇಚ್ಛಾ ಹೇಳಿಕೆ ನೀಡಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2005ನೇ ಇಸವಿ ಜನವರಿ ತಿಂಗಳಿನಲ್ಲಿ ಕುಂದಾಪುರದ ಹಳ್ಳಿಹೊಳೆ ಗ್ರಾಮದ ಶೇಷಾಚಲ ಯಡಿಯಾಳ ಎನ್ನುವವರು ಸ್ಥಳೀಯರಿಂದ ಕಾಡು ಉತ್ಪತ್ತಿಯನ್ನು ತೆಗೆದುಕೊಳ್ಳದಿರುವ ಬಗ್ಗೆ ದೂರು ಬಂದಿದ್ದರಿಂದ ನಾನು, ನಮ್ಮ ತಂಡದ ವಿಕ್ರಮ್ ಗೌಡ, ಹೊರಳೆ ಸರೋಜಾ, ಮಹೇಶ, ದೇವೇಂದ್ರ, ನೀಲಗುಳಿ ಪದ್ಮನಾಭ ಹಾಗೂ ವಸಂತ ಎನ್ನುವವರು ಕೋವಿ ಹಿಡಿದುಕೊಂಡು ಹಳ್ಳಿಹೊಳೆಯಲ್ಲಿರುವ ಶೇಷಾಚರ ಯಡಿಯಾಳರ ಮನೆಗೆ ಹೋಗಿದ್ದು, ಅವರಿಗೆ ಸ್ಥಳೀಯರ ಕಾಡು ಉತ್ಪತ್ತಿಯನ್ನು ತೆಗೆದುಕೊಳ್ಳಬೇಕು, ಒಳ್ಳೆಯ ಬೆಲೆ ನೀಡಬೇಕು ಎಂದು ಹೇಳಿ ಅವರಿಗೆ ಬೆದರಿಕೆ ಹಾಕಿರುವುದಾಗಿ ಹೇಳಿದ್ದು, ನನ್ನ ಜೊತೆಯಲ್ಲಿ ಬಂದರೆ ಬೆದರಿಕೆ ಹಾಕಿದ ಸ್ಥಳವನ್ನು ತೋರಿಸುವುದಾಗಿ ಹೇಳಿಕೆಯನ್ನು ನೀಡಿರುತ್ತಾರೆ. ಸದ್ರಿ ಸ್ವ ಇಚ್ಛಾ ಹೇಳಿಕೆ ಭಾಗವನ್ನು ನಿಪಿ-25 ಎಂದು ಗುರುತಿಸಲಾಯಿತು. ಈ ಬಗ್ಗೆ ಮಹಜರು ನಡೆಸಲು ಪಂಚರನ್ನು ಕಳುಹಿಸಿಕೊಡುವಂತೆ ಸಿದ್ದಾಪುರ ವಲಯ ಅರಣ್ಯಾಧಿಕಾರಿಯವರಿಗೆ ಕೋರಿಕೆ ಪತ್ರ ಸಲ್ಲಿಸಿದೆನು.

ದಿನಾಂಕ:17-05-2022ರಂದು ಪಂಚರಾದ ಮಂಜುನಾಥ ಮತ್ತು ಅಭಿನಂದನ್ ರವರನ್ನು ಕಳುಹಿಸಿಕೊಟ್ಟಿರುತ್ತಾರೆ. ಆರೋಪಿ, ಪಂಚರು ಹಾಗೂ ಸಿಬ್ಬಂದಿಯವರಾದ ವಿನಯ ಕೊರ್ಲಹಳ್ಳಿ ಪಿ ಎಸ್ ಐ, ಸಿಪಿಸಿ 167 ಅನೀಲ್ ಚೌಹಾಣ್ ಹೆಚ್ ಸಿ 63 ವಿಜಯ ಕುಮಾರ್ ಹಾಗೂ ರಮೇಶ್ ಕುಲಾಲ ರವರೊಂದಿಗೆ ಆರೋಪಿ ಕೃಷ್ಣಮೂರ್ತಿ ತೋರಿಸಿದಂತೆ ಸ್ಥಳದಲ್ಲಿ 10.40 ಗಂಟೆಯಿಂದ 11.05 ಗಂಟೆಯವರೆಗೆ ಸ್ಥಳ ಮಹಜರನ್ನು ಮಾಡಿರುತ್ತೇನೆ. ಮಹಜರು ಕಾಲದಲ್ಲಿ ನಕಾಶೆಯನ್ನು ತಯಾರಿಸಿ ಛಾಯಾಚಿತ್ರ ತೆಗೆದಿರುತ್ತೇನೆ. ಸಾಕ್ಷಿ ಸದ್ರಿ ಮಹಜರು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-21 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-21ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನಕ್ಷೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-22 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-22ಬಿ ಎಂದು ಗುರುತಿಸಲಾಯಿತು. ಮಹಜರು ಸಮಯ ತೆಗೆದ ಒಂದು ಛಾಯಾಚಿತ್ರ ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿದೆ.

ಆರೋಪಿಯನ್ನು ನೋಡಿ ಗುರುತಿಸಿದ ಬಗ್ಗೆ ಸ್ಥಳದಲ್ಲೇ ಇದ್ದ ಶೇಷಾಚಲ ಯಡಿಯಾಳ, ಕಾಂತೀಮತಿ ಯಡಿಯಾಳ, ಶಂಕರ ಹಾಗೂ ಮಹಾಬಲ ಇವರುಗಳನ್ನು ವಿಚಾರಣೆ ಮಾಡಿ ಅವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಶೇಷಾಚಲ ಯಡಿಯಾಳ ನನ್ನ ಮುಂದೆ ನಿಪಿ-4ರಂತೆ ಶಂಕರ ರವರು ನನ್ನ ಮುಂದೆ ನಿಪಿ-10ರಂತೆ ಮತ್ತು ಮಹಾಬಲ ರವರು ನನ್ನ ಮುಂದೆ ನಿಪಿ-7ರಂತೆ ಹೇಳಿಕೆ ನೀಡಿರುತ್ತಾರೆ.

ಪಂಚರಾದ ಮಂಜುನಾಥ, ಅಭಿನಂದನ್ ಪಿಎಸ್ ಐ ವಿನಯ ಕೊರ್ಲಹಳ್ಳಿ ಮತ್ತು ಅನೀಲ್ ಚೌಹಾಣ್ ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆ ಪಡೆದುಕೊಂಡಿರುತ್ತೇನೆ.

ದಿನಾಂಕಃ18-05-2022ರಂದು ಮಹಜರು ಕಾಲದಲ್ಲಿ ಛಾಯಾಚಿತ್ರ ತೆಗೆಸಿದ ಬಗ್ಗೆ ಸಿಪಿಸಿ 1146 ರಮೇಶ್ ಕುಲಾಲ್ ರವರಿಂದ ಕಲಂ 65ಬಿ ರಡಿಯಲ್ಲಿ ಪ್ರಮಾಣ ಪತ್ರ ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ. ಸಾಕ್ಷಿ ಸದ್ರಿ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-26 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-26ಎ ಎಂದು ಗುರುತಿಸಲಾಯಿತು.

ದಿನಾಂಕಃ18-06-2022ರಂದು ತನಿಖೆಯನ್ನು ಪೂರ್ಣಗೊಳಿಸಿ ತನಿಖೆ ಸಮಯ ಸಂಗ್ರಹಿಸಿದ ದಾಖಲಾತಿಗಳನ್ನು ಕಲಂ 173(8) ಸಿ ಆರ್ ಪಿ ಸಿ ಅಡಿಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆರೋಪಿಯನ್ನು ವಿ.ಸಿ. ಮುಖಾಂತರ ಹಾಜರುಪಡಿಸಿರುವುದಿಲ್ಲ. ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲಾ ಅಂತ ತಿಳಿಸಿದ್ದು ಅದಂರತೆ ಸಾಕ್ಷಿ ಆರೋಪಿ ಬಿ ಜಿ ಕೃಷ್ಣಮೂರ್ತಿ ಈತನನ್ನು ಗುರುತಿಸಿದ್ದಾರೆ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಆರ್ ಕೆ ಟಿ ವಕೀಲರಿಂದ**

ಆರೋಪಿತನನ್ನು ನಾನು ಪಂಚನಾಮೆ ಸ್ತಳಕ್ಕೆ ಕರೆದುಕೊಂಡು ಹೋದ ನಮ್ಮ ಇಲಾಖಾ ವಾಹನದ ಸಂಖ್ಯೆ ಹೇಳಲಿಕ್ಕೆ ಬರುವುದಿಲ್ಲ. ಆರೋಪಿತನು ನಮ್ಮನ್ನು ಕುಂದಾಪುರದ ಹಳ್ಳಿಹೊಳೆ ಗ್ರಾಮದ ಶೇಷಾಚಲ ಯಡಿಯಾಳ ಎನ್ನುವವರ ಮನೆಯ ಮುಂದಿನ ಸ್ತಳವನ್ನು ತೋರಿಸಿ ನಾವು ನಕ್ಸಲ್ ತಂಡದವರು ಕೋವಿ ಹಿಡಿದುಕೊಂಡು ಶೇಷಾಚಲ ಯಡಿಯಾಳ ಮತ್ತು ಮನೆಯವರಿಗೆ ಬೆದರಿಕೆ ಹಾಕಿದ ಸ್ತಳ ಎಂದು ತೋರಿಸಿಕೊಟ್ಟಿಲ್ಲ ಎಂದರೆ ಸರಿ ಅಲ್ಲಾ. ಶೇಷಾಚಲ ಯಡಿಯಾಳ, ಕಾಂತೀಮತಿ ಯಡಿಯಾಳ, ಶಂಕರ ಹಾಗೂ ಮಹಾಬಲ ರವರು ನನ್ನ ಮುಂದೆ ಆರೋಪಿತನನ್ನು ಗುರುತಿಸಿ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ ಅಲ್ಲಾ. ನಿಪಿ-23 ಛಾಯಾಚಿತ್ರವನ್ನು ಅನುಕೂಲಕ್ಕೆ ತಕ್ಕಂತೆ ಬೇರೆ ಯಾವುದೋ ಜಾಗದಲ್ಲಿ ತೆಗೆದ ಛಾಯಾಚಿತ್ರ ಆಗಿರುತ್ತದೆ ಎಂದರೆ ಸರಿ ಅಲ್ಲಾ. ಅದರಂತೆ ರಮೇಶ್ ಈತನು ನನ್ನ ಮುಂದೆ ಕಲಂ 65ಬಿ ರಡಿಯಲ್ಲಿ ನಿಪಿ-26ರಂತೆ ಪ್ರಮಾಣ ಪತ್ರ ನೀಡಿಲ್ಲ ಎಂದರೆ ಸರಿ ಅಲ್ಲಾ. ನಿಪಿ-26ನ್ನು ಅನುಕೂಲಕ್ಕೆ ತಕ್ಕಂತೆ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿ ಅಲ್ಲಾ. ನಾನು ಹೇಳಿದಂತೆ ಆರೋಪಿತನು ನಿಪಿ-25 ಯಾವುದೇ ಸ್ವ ಇಚ್ಛಾ ಹೇಳಿಕೆ ನೀಡಿಲ್ಲ ಎಂದರೆ ಸರಿ ಅಲ್ಲಾ. ಮತ್ತು ಅವನು ಯಾವಾಗಲೂ ನಾನು ಹೇಳಿದಂತೆ ಪಂಚನಾಮೆ ಸ್ತಳಕ್ಕೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿ ಅಲ್ಲಾ. ಮತ್ತು ಈ ಪ್ರಕರಣದಲ್ಲಿ ಯಾವುದೇ ಸಾಕ್ಷಿದಾರರು ನನ್ನ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿ ಅಲ್ಲಾ. ನಾನು ಹೇಳಿದಂತೆ ಪಂಚನಾಮೆ, ನಕಾಶೆಯನ್ನು ಠಾಣೆಯಲ್ಲೇ ಸೃಷ್ಟಿ ಮಾಡಿ ಪ್ರಕರಣಕ್ಕೆ ಅನುಕೂಲವಾಗುವಂತೆ ಕಡತದಲ್ಲಿ ಅಳವಡಿಸಿ ಯಾವುದೇ ತನಿಖೆ ಮಾಡದಿದ್ದರೂ ಸಹಾ ತನಿಖೆ ಮಾಡಿದ್ದೆ ಅಂತ ಸುಳ್ಳು ಹೆಚ್ಚುವರಿ ದೊಷಾರೋಪಣಾ ಪಟ್ಟಿಯನ್ನು

ಆರೋಪಿತನು ತಪ್ಪು ಮಾಡದಿದ್ದರೂ ಸಹಾ ಆರೋಪಿ ವಿರುದ್ಧ ದಾಖಲಿಸಿದ್ದೇನೆ ಎಂದರೆ ಸರಿ ಅಲ್ಲಾ. ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿ ಅಲ್ಲಾ. ನಾನು ಹೇಳಿದಂತೆ ಆರೋಪಿಯ ಸ್ವ ಇಚ್ಛಾ ಹೇಳಿಕೆಯಂತೆ ನಾನು ಸ್ತಳಕ್ಕೆ ಭೇಟಿ ಕೊಟ್ಟೇ ಇಲ್ಲಾ ಯಾವುದೇ ಪಂಚರನ್ನು ಬೇರೆ ಇಲಾಖೆಯಿಂದ ಈ ಪ್ರಕರಣಕ್ಕೆ ಪಡೆದುಕೊಂಡೇ ಇಲ್ಲಾ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**